ಮಧುಳ ಜತೆಯಲ್ಲಿ ಸಿನಿಮಾ ನೋಡುವುದೆಂದರೆ ಆಮೇಲೆ ಒಂದು ವಾರವಾದರೂ ಪುಷ್ಕಳ ಚರ್ಚೆ ನಡೆಸಬಹುದು. ನೋಡನೋಡುತ್ತಲೇ ಅವಳು ಅನೇಕ ಸೂಕ್ಷ್ಮ ವಿಷಯಗಳ ಕಡೆಗೆ ಗಮನ ಸೆಳೆಯುತ್ತಾಳೆ. ಆದ್ದರಿಂದ ಅವಳನ್ನು ಬಿಟ್ಟು ಸಿನಿಮಾ ನೋಡುವುದೆಂದರೆ, ಅದರಲ್ಲಿಯೂ ರೇ ಚಿತ್ರ ನೋಡುವುದೆಂದರೆ ಅದೊಂದು ದೊಡ್ಡ ನಷ್ಟವೇ ಸರಿ.

6:30ರ ಗಂಟೆ ಬಾರಿಸಿತು. ಫಿಲ್ಮ್ ಪ್ರಾರಂಭವಾಗುವುದಕ್ಕೆ ಇನ್ನೂ ಇಪ್ಪತ್ತು ನಿಮಿಷವಾದರೂ ಇವೆ. ಇವಳು ಯಾಕೆ ಇನ್ನೂ ಬರಲಿಲ್ಲ? ಬೆಳಿಗ್ಗೆ 10 ಗಂಟೇಲಿ ಎಷ್ಟು ಖಾತ್ರಿಯಾಗಿ ಹೇಳಿದ್ದಳು. ಇದೇಕೆ ಹೀಗೆ ಮಾಡಿದಳು?

ಜೇಬಲ್ಲಿ ತಡಕಾಡಿ ಅರ್ಧವಾಗಿದ್ದ ಸಿಗರೇಟೊಂದನ್ನು ತೆಗೆದು ತುಟಿಗಿಟ್ಟೆ. ಇನ್ನೇನು ಸಿಗರೇಟು ಹೊತ್ತಿಸಿಕೊಳ್ಳಬೇಕು. ಯಾರೊ ರಿಕ್ಷಾದಲ್ಲಿ ಇಳಿದರು. ಛೆ! ಮಧು ಅಲ್ಲ. ಈ ಹುಡುಗಿ ಎಷ್ಟು ಸ್ಮಾರ್ಟಾಗಿದಾಳೆ! ಮಧು ಕೂಡ ಇಷ್ಟು ಸ್ಮಾರ್ಟಾಗಿರಬೇಕು ಅಂತ ನಿರೀಕ್ಷೆ ಮಾಡುವುದು ಸ್ವಾರ್ಥದ ಪರಮಾವಧಿ. ಎಲ್ಲಿ ಬುದ್ಧಿವಂತಿಕೆ ಇರುತ್ತದೊ ಅಲ್ಲಿ ರೂಪ ಇರುವುದಿಲ್ಲವಂತೆ. ಅಂದರೆ ಮಧು ಬುದ್ಧಿವಂತಳು ಎಂತಲೆ? ಅವಳನ್ನು ದಡ್ಡಿ ಅಂತ ಯಾರು ತಾನೆ ಹೇಳಬಹುದು? ದಡ್ಡಿ ಅಲ್ಲದೆ ಇದ್ದರೆ ಹೀಗೆ ನನ್ನನ್ನು ಕಾಯಿಸ್ತಾ ಇದ್ದಳೆ?

ಸೆಕೆಂಡುಗಳು ಸರಿದಂತೆಲ್ಲ ಇವಳಿಗಾಗಿ ಕಾಯುವುದೆ? ಬಿಡುವುದೆ? ಎನಿಸಿ, 6:50ಕ್ಕೆ ಕೌಂಟರಿನಲ್ಲಿ ಟಿಕೆಟ್‌ಕೊಂಡು, ಒಳಗೆ ಹೋಗುವಾಗಲೂ ಮನಸ್ಸು ತಾಕಲಾಡುತ್ತದೆ. ಒಳಗಡೆ ಕುಳಿತಾಗಲೂ ಮನಸ್ಸು ಪೂರ್ಣವಾಗಿ ಚಿತ್ರದ ಮೇಲೆ ಕೇಂದ್ರೀಕೃತವಾಗುವುದೇ ಇಲ್ಲ. ಇಂಟರ್‌ವೆಲ್‌ಗೇ ಹೊರಟು ಬಂದುಬಿಡೋಣವೆ ಎನಿಸುತ್ತದೆ. ಆದರೆ ಒಬ್ಬ ದಡ್ಡ ಹುಡುಗಿಗಾಗಿ ಒಂದು ಒಳ್ಳೆಯ ಚಿತ್ರ ತಪ್ಪಿಸಿಕೊಳ್ಳುವುದು ಸರಿಯಲ್ಲ ಎಂದು ನಿರ್ಧರಿಸುತ್ತೇನೆ. 'ಪ್ರತಿದ್ವಂದ್ವಿ' ರೇನ ಅತ್ಯಂತ ಶ್ರೇಷ್ಠ ಚಿತ್ರಗಳಲ್ಲಿ ಒಂದಲ್ಲದಿದ್ದರೂ, ಬೇರೆಯವರ ಚಿತ್ರಗಳಿಗೆ ಹೋಲಿಸಿದರೆ ಉತ್ತಮ ಎಂದು ಪಕ್ಕದವರು ಮಾತನಾಡಿಕೊಳ್ಳುವುದು ಕಿವಿಗೆ ಬಿದ್ದು ರೇಯ ಯಾವ ಚಿತ್ರವನ್ನೂ ನೋಡದಿದ್ದವರಿಗೆ ಇದೇ ಶ್ರೇಷ್ಠ ಎಂದು ಭಾವಿಸುವುದು ಶ್ರೇಷ್ಠವೇ ಅಲ್ಲವೇ? ಒಂದೂ ಮನಸ್ಸಿಗೆ ಹತ್ತದಂತೆ ಮಾಡಿದ ಮಧು ಬಗ್ಗೆ ಕೋಪಗೊಳ್ಳುತ್ತೇನೆ. ಫಿಲ್ಮಿನ ಕೊನೆಯಲ್ಲಿ ನಿರಾಸೆಯಿಂದ ಎದ್ದು ಬರುತ್ತೇನೆ.

ಅನಿರೀಕ್ಷಿತವಾಗಿ ಗೇಟಿನ ಹೊರಗೆ ಅವಳ ಮುಖ ಕಂಡಾಗ, ಬಾ ಇಲ್ಲಿ ಎಂದು ಸನ್ನೆ ಮಾಡುತ್ತೇನೆ. 'ಇದೇನು ಸೆಕೆಂಡ್ ಷೋಗೆ ಹೋಗ್ತೀಯಾ?' ಎಂದು ವ್ಯಂಗ್ಯ ಬೆರೆತ ದನಿಯಲ್ಲಿ ಕೇಳುತ್ತೇನೆ. ಅವಳು 'ಇಲ್ಲ' ಎಂದು ಹೇಳುವಾಗ ಅವಳಿಗೆ ಯಾವುದೋ ದುಃಖ ಕಾಡುತ್ತಿರುವುದು ಭಾಸವಾಗುತ್ತದೆ. ಕುಮಾರನ ಪೆಟ್ಟಿಗೆ ಅಂಗಡಿಯಲ್ಲಿ ಸಿಗರೇಟು ಕೊಂಡುಕೊಳ್ಳುತ್ತಾ ಅದನ್ನೇ ಯೋಚನೆ ಮಾಡುತ್ತೇನೆ. ಮೊದಲನೇ ಬಾರಿಗೆ, ಅವನು ತನ್ನ ಅಂಗಡಿಯ ಮೇಲೆ ಬರೆದಿರುವ 'ಎಲ್ಲರನ್ನೂ ಪ್ರೀತಿಸು' ಎನ್ನುವುದು ಕುಹಕದ ಮಾತಿನಂತೆ ಕಂಡುಬರುತ್ತದೆ. ಪ್ಯಾಕಿನಿಂದ ಒಂದು ಸಿಗರೇಟು ತೆಗೆದು, ಬೆಂಕಿಕೊಟ್ಟು, ಮಧುಳ ಕಡೆ ತಿರುಗಿದಾಗ, ಅವಳ ಮುಖದಲ್ಲಿ ಗೆಲುವಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

'ನಿಮಗೆ ತೊಂದರೆ ಕೊಟ್ಟೆ' ಮಧು ನನ್ನ ಶರ್ಟಿನ ಮೇಲೆ ಕುಳಿತಿದ್ದ ಏನೋ ದೂಳನ್ನು ತೆಗೆಯುತ್ತಾ ಹೇಳುತ್ತಾಳೆ.

'ತೊಂದರೆ ಕೊಡಬೇಕು ಅನ್ನೋದೇ ಉದ್ದೇಶ ಆಗಿದ್ದ ಮೇಲೆ, ಇನ್ಯಾಕೆ ಇದೆಲ್ಲ?' —ಅವಳ ಕೈಯನ್ನು ತೆಗೆದು ದೂರ ಹಾಕುತ್ತೇನೆ. ಮಧು ಕೋಪಗೊಳ್ಳುವುದಿಲ್ಲ. ಕಂಡೂ ಕಾಣದಂತೆ